ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 51 ಡಿಸೆಂಬರ್ 21, 1986 ಬೆಲೆ 50 ಪೈಸೆ.

ಎ. ಸಿ. ಸಿ. ಬ್ಯಾಚ್‌ಕಾಕ್ ಹೋರಾಟ ಸಿ. ಪಿ. ಐ. (ಎಂ) ಎಂಪಿಗಳ ಮನವಿ

ಗುಲ್ಬರ್ಗದ ಶಹಾಬಾದ್‌ನಲ್ಲಿರುವ ಎ.ಸಿ.ಸಿ. ಬ್ಯಾಚ್‌ಕಾಕ್ ಆಡಳಿತ ವರ್ಗ ಕಾರ್ಖಾನೆಯನ್ನು ಸಂಪೂರ್ಣವಾಗಿ ಮುಚ್ಚಲು ಬಾಂಬೆ ಹೈಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದೆ.

ಈ ಹಿನ್ನೆಲೆಯಲ್ಲಿ, ರಾಜ್ಯ ಸಭೆಯಲ್ಲಿ ಸಿ.ಪಿ.ಐ. (ಎಂ) ನಾಯಕರಾದ ದೀಪೇನ್ ಘೋಷ್‌ರವರ ನಾಯಕತ್ವದಲ್ಲಿ ಬಸುದೇಬ್ ಆಚಾರ್ಯ ಸಿ.ಪಿ.ಐ. (ಎಂ) ಲೋಕಸಭಾನಾಯಕರು, ಪೂರ್ಣ ಚಂದ್ರ ಮಾಲಿಕ್ ಎಂ. ಪಿ. ಅನಂದಪಾಠಕ್ ಎಂ. ಪಿ. ಅವರ ಜೊತೆಗೆ ಕಾಂಗ್ರೆ ಎಂ. ಪಿ. ವಿವಿಧ ಕಾರ್ಮಿಕ ಸಂಘಗಳ ಪ್ರತಿನಿಧಿಗಳೂ ಸೇರಿದ ನಿಯೋಗವೊಂದು ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರನ್ನು ಭೇಟಿ ಮಾಡಿ ಕೂಡಲೇ ಪ್ರಧಾನ ಮಂತ್ರಿಯವರು ಮಧ್ಯ ಪ್ರವೇಶಮಾಡಿ ಆಡಳಿತ ವರ್ಗದ ಈ ಕ್ರಮ ವಿರೋಧಿಸಲು ಮನವಿ ಮಾಡಿತು.

ಪ್ರಧಾನ ಮಂತ್ರಿಯವರು ಆಡಳಿತ ವರ್ಗದ ಈ ಕ್ರಮವನ್ನು ತಪ್ಪಿಸುವ ಮಾರ್ಗಗಳನ್ನು ಪರಿಶೀಲಿಸಬೇಕೆಂದು ಆದೇಶ ನೀಡಿದ್ದಾರೆ.

ವಿರಾಜಪೇಟೆಗೆ ಕಾಂ. ನಾಯನಾರ್ – ಸತ್ತ ಖಾದರ್‌ಗೆ ರಾಚಯ್ಯನವರಿಂದ 20,000 ರೂ ಪರಿಹಾರದ ಭರವಸೆ

ನೊಂದ ಅಲ್ಪ ಸಂಖ್ಯಾತರಿಗೆ ಧೈರ್ಯ ತುಂಬಿದ ಭೇಟಿ

ಒಂಭತ್ತು ತಿಂಗಳ ಹಿಂದೆ ಮಾರ್ಚ್ 4 ರಂದು ಮೊದಲ ಘಟನೆ ನಡೆದ ಮರುದಿನವೇ ಸಿ. ಪಿ. ಐ. (ಎಂ.) ವಿಧಾನ ಸಭಾ ಸದಸ್ಯರಾದ ಕಾಂ|| ಟಿ. ಎಸ್. ಮಣಿ ಗ್ರಹಮಂತ್ರಿಗಳಿಗೆ ಈ ಬಗ್ಗೆ ತಿಳಿಸಿದ್ದರು. ಅದಾದ ಮೇಲೆ ವಿರಾಜಪೇಟೆಯ ಸಿ. ಪಿ. ಐ. (ಎಂ.) ಕಾರ್ಯದರ್ಶಿಗಳು ಮಡಿಕೇರಿಯ ಆರ್. ಟಿ. ಒ. ಅವರಿಗೆ ಮುಸ್ಲಿಮರು, ಹಾಗೂ ಮಲೆಯಾಳೀ ಅಲ್ಪ ಸಂಖ್ಯಾತರಿಗೆ ಆರ್. ಎಸ್. ಎಸ್. ಹಾಗೂ ಇತರ ಪ್ರತಿಗಾಮೀ ಶಕ್ತಿಗಳಿಂದಾಗುತ್ತಿರುವ ಹಿಂಸಾಚಾರದ ಬಗ್ಗೆ ಬರೆದಿದ್ದರು. ಆದರೂ ತಕ್ಕ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಿಲ್ಲ. ಪ್ರತಿಗಾಮಿಗಳ ಗೂಂಡಾ ಧಾಳಿಗಳು ಹೆಚ್ಚುತ್ತಲೇ ಹೋದವು. ಮಲ್ಲಂಬಳ್ಳಿಯಲ್ಲಿ ಅಂಗಡಿಯಿಟ್ಟಿದ್ದ ಅಬ್ದುಲ್ ಖಾದರ್ ಮೇಲೆ ಹಿಂದೂ ಕೋಮುವಾದಿಗಳು ಪ್ರಾಣಾಂತಿಕ ಹಲ್ಲೆ ಮಾಡಿದರೂ ಕೂಡಾ ಪೋಲೀಸರು ಕೇವಲ ಕಿರುಕುಳದ ಕೇಸೆಂದು ದಾಖಲು ಮಾಡಿಕೊಂಡರಷ್ಟೆ. ಅತ್ತ ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಮುಸ್ಲಿಂ ಮೂಲಭೂತವಾದಿಗಳು ಒಂದಾಗ ತೊಡಗಿದರು.

ಎರಡೂ ಕಡೆಯ ಈ ಕೋಮು ಶಕ್ತಿಗಳನ್ನೂ ಎದುರಿಸಿದವರೆಂದರೆ ಸಿ. ಪಿ. ಐ. (ಎಂ.) ಹಾಗೂ ಇತರ ಪ್ರಜಾಪ್ರಭುತ್ವ ವಾದಿಗಳು ಮಾತ್ರ ಇದಕ್ಕಾಗಿ ಅವರು ಕೋಮುವಾದಿಗಳ ತೀವ್ರ ಧಾಳಿ ಎದುರಿಸ ಬೇಕಾಯಿತು. ಅರವನತಕ್ಲುನಲ್ಲಿ ಡಿ. ವೈ. ಎಫ್. ಐ. ಕಛೇರಿಯ ಮೇಲ ಹಲ್ಲೆ ನಡೆಯಿತು. ಕೋಮು ಸೌಹಾರ್ದದ ಬಗ್ಗೆ ಪ್ರಚಾರ ನಡೆಸಲು ಪೋಲೀಸರೂ ಅವಕಾಶ ನೀಡಲಿಲ್ಲ. ಅಖಿಲ ಭಾರತ ಪ್ಲಾಂಟೇಶನ್ ಕಾರ್ಮಿಕರ ಮುಖಂಡರು ತಮ್ಮ ಕಾರ್ಯಕಾರೀ ಸಮಿತಿಯ ಸಭೆಯ ಸಂದರ್ಭದಲ್ಲಿ ಕೂಡಾ ಒಂದು ಸಾರ್ವಜನಿಕ ಸಭೆಯನ್ನು ಏರ್ಪಡಿಸಲು ಪರವಾನಿಗೆ ನಿರಾಕರಿಸಲಾಯಿತು. ಆದರೆ ಆರ್. ಎಸ್. ಎಸ್. ಗೆ ಮಾತ್ರ ಮಡಿಕೇರಿಯಲ್ಲಿ ಅವರ "ಪಥ ಸಂಚಲನ" ನಡೆಸಲು ಅವಕಾಶ ನೀಡಲಾಯಿತು.

ಈ ಹಿನ್ನೆಲೆಯಲ್ಲಿ ಕೇರಳದ ಮಾಜಿ ಮುಖ್ಯ ಮಂತ್ರಿ ಹಾಗೂ ಈಗ ವಿರೊಧ ಪಕ್ಷದ ಮುಖಂಡ ಮತ್ತು ಸಿ. ಪಿ. ಐ. (ಎಂ.) ನ ಕೇಂದ್ರ ಸಮಿತಿ ಸದಸ್ಯರಾದ ಕಾಂ|| ಇ. ಕೆ. ನಾಯನಾರ್ ಡಿಸೆಂಬರ್ 14 ರಂದು ಕೊಡಗು ಜಿಲ್ಲೆಯ ಹಾಗೂ ಮೈಸೂರಿನ ಹಿಂಸಾಚಾರ ಪೀಡಿತ ಪ್ರದೇಶಗಳಲ್ಲಿ ಪ್ರವಾಸ ಮಾಡಿ ಪರಿಸ್ಥಿತಿಯನ್ನು ಅಧ್ಯಯನ ಮಾಡಿದರು. ಒಂದು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು ವಾಸ್ತವವಾಗಿ ಇದು ವಿರಾಜಪೇಟೆಯಲ್ಲಿ ಕಳೆದ ಒಂಭತ್ತು ತಿಂಗಳಲ್ಲಿ ನಡೆದ ಮೊದಲ ಸಾರ್ಜನಿಕ ಸಭೆಯಾಗಿತ್ತು. ಈ ಸಭೆಯಲ್ಲಿ ಕಾಂ|| ನಾಯನಾರ್ ಸ್ಥಳೀಯ ಅಧಿಕಾರಿಗಳ ಪ್ರಜಾಪ್ರಭುತ್ವ ವಿರೋಧೀ ನಿಲುವನ್ನು ಖಂಡಿಸಿದರು ಈಗಾಗಲೇ ಜೀವ ಭಯದಿಂದಾಗಿ ಸುಮಾರು 140 ಎಸ್ಟೇಟ್ ಕಾರ್ಮಿಕರು ಹಾಗೂ ಇತರ ಬಡ ಜನರು ತಮ್ಮ ಗುಡಿಸಲು ಬಿಟ್ಟೋಡಿದ್ದಾರೆಂಬುದು ಈ ಪ್ರವಾಸದ ವೇಳೆಯಲ್ಲಿ ಕಂಡುಬಂತು. ಮುಸ್ಲಿಂ ಅಂಗಡಿಗಳು ಹಾಗೂ ಗುಡಿಸಲುಗಳನ್ನೂ ಸುಟ್ಟು ಹಾಕಲಾಗಿದೆ. ಸಾಮಾನು ಹೊರುವ ಕೂಲಿಗಳನ್ನೂ ಅವರು ಮುಸ್ಲಿಂ ಅಥವಾ ಮಳಿಯಾಳಿಗಳೆಂಬ ಕಾರಣಕ್ಕೆ ಕೆಲಸ ಮಾಡದಂತೆ ಆತಂಕವೊಡ್ಡಲಾಗಿದೆ. "ಜನಜಾಗೃತಿ ಸಮಿತಿ" ಯ ಹೆಸರಿನಡಿಯಲ್ಲಿ ಆರ್. ಎಸ್. ಎಸ್. ಹಾಗೂ ಕಾಂಗ್ರೆಸ್ (ಐ) ನವರು ಬಡ ಮಲೆಯಾಳಿಗಳ ಹಾಗೂ ಮುಸ್ಲಿಮರ ಮೇಲೆ ಹಲ್ಲೆ ಮಾಡಿದ್ದಾರೆ. ನಗರ ಸಭೆಯ ಅಧ್ಯಕ್ಷರಾದ ಎಂ. ಕೆ. ಪೂವಯ್ಯ ಮುಂತಾದ ಕಾಂಗ್ರೆಸ್, (ಐ) ಮುಖಂಡರು ಈ ದಾಳಿಕೋರರಿಗೆ ನೆರವು ನೀಡಿರುವುದು ಕಂಡುಬಂತು.

ಪರಿಸ್ಥಿತಿಯನ್ನು ಸ್ವತಃ ನೋಡಿದ ನಂತರ ಕಾಂ|| ನಾಯನಾರ್ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ|| ಪಿ. ರಾಮಚಂದ್ರ ರಾವ್ ಅವರೊಂದಿಗೆ ಬೆಂಗಳೂರಿನಲ್ಲಿ ಡಿಸೆಂಬರ್ 15 ರಂದು ರಾಜ್ಯದ ಗೃಹ ಮಂತ್ರಿ ಬಿ. ರಾಚಯ್ಯ ನವರನ್ನು ಭೇಟಿಯಾಗಿ ಕೊಡಗು ಹಾಗೂ ಮೈಸೂರಿನಲ್ಲಿ ಭಾಷಾ ಹಾಗೂ ಧಾರ್ಮಿಕ ಅಲ್ಪಸಂಖ್ಯಾತರ ಪರಿಸ್ಥಿತಿ ಬಗೆ ಚರ್ಚಿಸಿದರು. ತಾವು ಕಂಡ ವಿಷಯಗಳ ಬಗ್ಗೆ ಒಂದು ಮನವಿಯನ್ನು ಮಂತ್ರಿಗಳಿಗೆ ಅರ್ಪಿಸಿದ ಕಾಂ|| ನಾಯನಾರ್ ಈ ಬಗ್ಗೆ ಕ್ರಮವನ್ನು ತಕ್ಷಣ ಕೈಗೊಳ್ಳಬೇಕೆಂದು ವಿನಂತಿಸಿ ಕೊಂಡರು. ಕಾಂ|| ನಾಯನಾರ್ ಅವರ ಕೋರಿಕೆಯಂತೆ ಕೊಡಗಿನಲ್ಲಿ ಒಂದು ಶಾಂತಿ ಸಮಿತಿ ರಚಿಸಲು, ಹಿಂದೂ ಕೋಮುವಾದಿಗಳಿಗೆ ಬಲಿಯಾದ ಅಬ್ದುಲ್ ಖಾದರ್‌ಗೆ ರೂ 20,000/- ಪರಿಹಾರ ನೀಡಲು ಹಾಗೂ ನೊಂದ ಇತರರಿಗೆ ಸೂಕ್ತ ನೆರವು ನೀಡಲು ಗೃಹ ಮಂತ್ರಿಗಳು ಒಪ್ಪಿದರು.

ನಿಸರ್ಗ ರಮಣೀಯತೆಯಿಂದ ತುಂಬಿ ತುಳುಕುವ ಕೊಡಗು ಜಿಲ್ಲೆ ಈಗ ಕೆಲವು ತಿಂಗಳುಗಳಿಂದ ಕೋಮು ದ್ವೇಷದಿಂದ ಕುದಿಯ ತೊಡಗಿದೆ. ಕೊಡಗು ಜಿಲ್ಲೆಯ ವೀರಾಜಪೇಟೆ ಇನ್ನಿತರ ಭಾಗಗಳಲ್ಲಿ ತೀವ್ರ ರೀತಿಯ ಹಿಂಸಾಚಾರಗಳು ನಡೆಯುತ್ತಿವೆ. ಅಲ್ಪ ಸಂಖ್ಯಾತ ಮುಸ್ಲಿಂ ಮಾಪಿಳ್ಳೆಗಳ ಪ್ರಾಣ ಮತ್ತು ಆಸ್ತಿ ಪಾಸ್ತಿಗಳಿಗೆ ಅಪಾಯವೊದಗಿದೆ. ಕೊಡಗಿನ ಆರೆಸ್ಸೆಸ್, ಜನ ಜಾಗೃತಿ ಸಮಿತಿ ಮುಂತಾದ ಪ್ರತಿಗಾಮೀ ಸಂಘಟನೆಗಳು ಬಹಳ ಹಿಂದಿನಿಂದಲೇ ಕೇರಳದಿಂದ ವಲಸೆ ಬಂದು ವ್ಯಾಪಾರ ವಹಿವಾಟುಗಳನ್ನು ನಡೆಸಿಕೊಂಡು ಬದುಕುತ್ತಿರುವ ಅಲ್ಪಸಂಖ್ಯಾತ ಮುಸ್ಲಿಮರ ವಿರುದ್ಧ ಸ್ಥಳೀಯ ಕೊಡವ ಜನಾಂಗದ ನಡುವೆ ಬಿತ್ತುತ್ತಿದ್ದ ಅಪಪ್ರಚಾರದ ವಿಷ ಬೀಜಗಳು ಈಗ ಮೊಳಕೆಯೊಡೆದು ಚಿಗುರತೊಡಗಿದೆ. ಜನರನ್ನು ಸುತ್ತಿ ಕೊಲ್ಲತೊಡಗಿವೆ.

6ನೇ ಅಖಿಲ ಭಾರತ ಎಸ್. ಎಫ್. ಐ. ಸಮ್ಮೇಳನ

ವಿಶಾಲ ಐಕ್ಯತೆ ಮತ್ತು ಬಲಿಷ್ಠ ಚಳುವಳಿ ಕಟ್ಟಲು ಕರೆ

ಜಸ್ ಬೀರ್ ಸಿಂಗ್ ನಗರ (ವಿಜಯವಾಡ)

1986 ಡಿಸೆಂಬರ್ 11 ರಿಂದ 15 ರವರೆಗೆ ವಿಜಯವಾಡದಲ್ಲಿ ಜರುಗಿದ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) 6ನೇ ಅಖಿಲ ಭಾರತ ಸಮ್ಮೇಳನವು ದೇಶದ ವಿದ್ಯಾರ್ಥಿ ಸಮುದಾಯಕ್ಕೆ ಈ ಕರೆಯನ್ನು ನೀಡುವುದರೊಂದಿಗೆ ಜಾಗತಿಕ ಶಾಂತಿ ಮತ್ತು ರಾಷ್ಟ್ರೀಯ ಸಮಗ್ರತೆಯ ರಕ್ಷಣೆಗೆ ಹಾಗೂ ಪ್ರಜಾಪ್ರಭುತ್ವ ಚಳುವಳಿಯ ಮುನ್ನಡೆಗೆ ಶ್ರಮಿಸಲು ವಿಜ್ಞಾಪಿಸಿದೆ.

ಡಿಸೆಂಬರ್ 11 ರಂದು ಮಧ್ಯಾಹ್ನ ಜರುಗಿದ ಬೃಹತ್ ವಿದ್ಯಾರ್ಥಿ ಮೆರವಣಿಗೆಯಲ್ಲಿ ಸುಮಾರು ಐವತ್ತು ಸಹಸ್ರ ವಿದ್ಯಾರ್ಥಿಗಳು ಪಾಲ್ಗೊಂಡಿದ್ದು ಆಂಧ್ರಪ್ರದೇಶದ ವಿದ್ಯಾರ್ಥಿ ಚಳುವಳಿಯ ಚರಿತ್ರೆಯಲ್ಲೇ ಇದೊಂದು ಹೊಸ ದಾಖಲೆಯಾಗಿದೆ. ಕರ್ನಾಟಕದಿಂದ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಮೆರವಣಿಗೆ ಮತ್ತು ಬಹಿರಂಗ ರ‍್ಯಾಲಿಯಲ್ಲಿ ಭಾಗವಹಿಸಿದ್ದರು. ಮೆರವಣಿಗೆಯ ಮುಂಭಾಗದಲ್ಲಿದ್ದ ಆರು ...ಜಗಳನ್ನು ಅನುಸರಿಸಿ ಅಖಿಲ ಭಾರತ ನಾಯಕರ ಮತ್ತು ವಿದೇಶೀ ...ಾರ್ದ ಪ್ರತಿನಿಧಿಗಳ ವಾಹನಗಳು ಸಾಗಿದವು. ನಂತರ ಕೆಂಪು ಸಮವಸ್ತ್ರ ಧರಿಸಿದ ಸುಮಾರು ಐದು ಸಹಸ್ರ ಸ್ವಯಂ ಸೇವಕರು, ಸಹಸ್ರಾರು ವಿದ್ಯಾರ್ಥಿನಿಯರೂ, ಬಾಲ ವಿದ್ಯಾರ್ಥಿಗಳು ರಸ್ತೆಯ ಇಕ್ಕೆಲಗಳಲ್ಲಿ ಸಾವಿರಗಟ್ಟಲೆ ಜನರು ಕೌತುಕಾಭಿಮಾನಗಳಿಂದ ವೀಕ್ಷಿಸುತ್ತಿದ್ದರು.

ಬಹಿರಂಗ ಸಭೆಯಲ್ಲಿ ಸೋವಿಯತ್

(8ನೇ ಪುಟ ನೋಡಿ)

ಸಮ್ಮೇಳನದಿಂದ ಹಿಂತಿರುಗುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೋಲಿಸರ ಲಾಠಿ

ಎಸ್. ಎಫ್. ಐ. ಸಮ್ಮೇಳನದಿಂದ ಹಿಂದಿರುಗಿ ಬರುತ್ತಿದ್ದ ವಿದ್ಯಾರ್ಥಿಗಳ ಮೇಲೆ ಬಂಗಾರಪೇಟೆ ರೈಲ್ವೆ ನಿಲ್ದಾಣದಲ್ಲಿ ಲಾಠಿ ಪ್ರಹಾರ ಮಾಡಿದರು. ಈ ಬಗ್ಗೆ ವಿದ್ಯಾರ್ಥಿ ಸಂಗಾತಿಯ ಮಾತಿನಲ್ಲೇ ಕೇಳಿ.

ಮದ್ರಾಸಿನಿಂದ ಹೊರಟ ರೈಲು, ಜ್ವಾಲರ್‌ಪೇಟೆ ಬಂದ ಕೂಡಲೆ ರೈಲ್ವೆ ಅಧಿಕಾರಿಗಳು ಹತ್ತು ಪೋಲಿಸಿನವರೊಡನೆ ಬಂದು ನಮ್ಮ ಸಂಗಾತಿಗಳನ್ನು ರೈಲಿನಿಂದ ಈಚೆಗೆಳೆದು ತಳ್ಳಿ ಹಾಕುತ್ತಿದ್ದರು. ಇದನ್ನು ಕಂಡ ಸಂಗಾತಿಗಳು ರೈಲನ್ನು ಜ್ವಾಲರ್‌ಪೇಟೆಯಲ್ಲಿ ತಡೆದರು. ಪೋಲಿಸ್ ಇನ್ಸ್‌ಪೆಕ್ಟರ್ 'ಭಾಗ್ಯರಾಜ್' ಬಂದು ನಮ್ಮೊಡನೆ ಮಾತುಕತೆ ನಡೆಸಿ,ಎಲ್ಲರಿಗೂ ರೈಲನ್ನು ಹತ್ತಲು ಅನುಮತಿ ನೀಡಿದಂತೆ ನಾಟಕವಾಡಿದರು. ಆದರೆ ರೈಲಿನ ಎಲ್ಲಾ ಬಾಗಿಲುಗಳನ್ನು ಹಾಕಿ ನಾವು ರೈಲು ಹತ್ತದಂತೆ ಮಾಡಿದರು ರೈಲು ಚಲಿಸಿತು. ಬರೀ ಐವತ್ತು ವಿದ್ಯಾರ್ಥಿಗಳು ಮಾತ್ರ ಅದರಲ್ಲಿ ಹತ್ತಿದ್ದರು ಇನ್ನುಳಿದ 700 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತೆ ರೈಲನ್ನು ತಡೆದೆವು. ವಿದ್ಯಾರ್ಥಿಗಳು ಶಾಂತವಾಗಿ ಪ್ರತಿಭಟನೆ ಮಾಡುವಂತೆ ಭಾಷಣದ ಮೂಲಕ ಕೇಳಿಕೊಳ್ಳಲಾಯಿತು. ತೊಂದರೆ ಕೊಟ್ಟ ಟಿ. ಟಿ.ಯ ವಿರುದ್ಧ ಸಹಿ-ಸಂಗ್ರಹ ಮಾಡಿ ಉನ್ನತ ರೈಲ್ವೆ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳಲು ಹಾಗೂ ಟ್ರೈನಿನಲ್ಲೆ ಉಳಿದ ಸಾಮಾನುಗಳನ್ನು ಕೊಡಿಸಬೇಕಾಗಿ ಕೇಳಿಕೊಂಡೆವು. ಅವರು ಭರವಸೆ ಕೊಟ್ಟ ನಂತರ ತಿರುಚಿ ಎಕ್ಸ್‌ಪ್ರೆಸ್‌ನಲ್ಲಿ ಹೊರಟೆವು.

ಬಂಗಾರಪೇಟೆಯಲ್ಲಿ ಜಂಟು ನಮ್ಮದೆ

ಬಂಗಾರುಪೇಟೆಗೆ ಮೊದಲೆ ಹೋಗಿದ್ದ ವಿದ್ಯಾರ್ಥಿಗಳು ರೈಲ್ವೆ ಮತ್ತು ಪೋಲಿಸ್ ಅಧಿಕಾರಿಗಳ ವರ್ತನೆಯನ್ನು ಪ್ರತಿಭಟಿಸಿ ಮೂರು ಗಂಟೆ ರೈಲು ತಡೆದರು ನಂತರ ಪೋಲಿಸರು ಲಾಠಿ ಚಾರ್ಜ್ ಮಾಡಿದರು. 23 ಜನ ವಿದ್ಯಾರ್ಥಿಗಳಿಗೆ ಗಾಯಗಳಾಗಿತ್ತು. ಉಳಿದವರು ನಾವು ಬಂಗಾರಪೇಟೆ ತಲುಪಿ ವಿಷಯ ತಿಳಿದ ಕೂಡಲೆ ಪೋಲಿಸ್ ಸ್ಟೇಷನ್‌ಗೆ ಮುತ್ತಿಗೆ ಹಾಕಿದೆವು. ನಾಲ್ಕು ಜನರನ್ನು ಬಂಧಿಸಿದ್ದರು. ಅದರಲ್ಲಿ ಚಿಂತಾಮಣಿ ಕಾಲೇಜಿನ ವಿದ್ಯಾರ್ಥಿನಿ ಕಾ। ಸುಜಾತ ಒಬ್ಬರು ಅವರು ಬಂಗಾರಪೇಟೆಯಲ್ಲಿ ರೈಲನ್ನು ತಡೆಯುವುದರಲ್ಲಿ ನಾಯಕತ್ವ ವಹಿಸಿದ್ದರು. ಸುಮಾರು ಮೂರು ಗಂಟೆಗಳ ಕಾಲ ನಮ್ಮ ಧರಣಿ ರೈಲ್ವೆಪೋಲಿಸ್ ಸ್ಟೇಷನ ಮುಂದೆ ನಡೆಯಿತು. ಅಲ್ಲಿಗೆ ಆಗಮಿಸಿದ ಕಾ। ಆರ್. ವೆಂಕಟರಾಮಯ್ಯ ಮುಳಬಾಗಿಲು ಎಂ. ಎಲ್. ಎ. ರವರು ಲಾಠಿ ಚಾರ್ಜ್ ಮಾಡಿದವರ ಮೇಲೆ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕಾಗಿ ಪೋಲಿಸ್ ಅಧಿಕಾರಿಗಳನ್ನು ಒತ್ತಾಯಿಸಿದರು. ಪೋಲೀಸಿನವರು ಅಧಿಕಾರಿಗಳು ನಡೆದ ಘಟನೆಗಳಿಗಾಗಿ ಕ್ಷಮೆಯಾಚಿಸಿ ಸಂಬಂಧಪಟ್ಟ ಪೋಲೀಸರ ಮೇಲೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ ನಂತರ ಧರಣಿ ಮುಕ್ತಾಯಗೊಳಿಸಿ ಬೃಂದಾವನ ಎಕ್ಸ್‌ಪ್ರೆಸ್‌ನಲ್ಲಿ ಹೊರಟು ಬಂದೆವು.

ಪೋಲಿಸರ ಕಿರುಕುಳವನ್ನು ಎದುರಿಸಿ ಸಂಘಟನೆ ಕಟ್ಟಿ ಬೆಳೆಸುವ ಉತ್ಸಾಹದಿಂದ ಎಲ್ಲರೂ ಅವರವರ ಊರಿಗೆ ಮರಳಿದರು.

ವರದಿ : ಕೆ. ಶಾಂತ ಕುಮಾರಿ.

ಮೈಸೂರು

ಮಹಿಳಾ ಸಂಘಟನೆ ಬಲಪಡಿಸಲು ವಿಮಲಾ ರಣದಿವೆ ಕರೆ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (ಎ. ಐ. ಡಿ. ಡಬ್ಲ್ಯೂ. ಎ.) ಉಪಾಧ್ಯಕ್ಷರಾದ ಕಾ॥ ವಿಮಲಾ ರಣದಿವೆಯವರು ಇತ್ತೀಚಿಗೆ ಮೈಸೂರಿಗೆ ಭೇಟಿ ನೀಡಿ ಮಹಿಳೆಯರ ಸಭೆಯನುದ್ದೇಶಿಸಿ ಮಾತನಾಡಿದರು. ಪ್ರಬಲವಾದ ಪ್ರಜಾಸತ್ತಾತ್ಮಕವಾದ ಮಹಿಳಾ ಸಂಘಟನೆ ಕಟ್ಟುವುದು, ಸಾಮಾಜಿಕ ಅನಿಷ್ಟಗಳ ಬಗ್ಗೆ ಹೋರಾಡುವುದು ಇಂದಿನ ತುರ್ತು ಅಗತ್ಯವೆಂದು ಕರೆ ನೀಡಿದರು.

ಸಭೆಯಲ್ಲಿ ಉಪಸ್ಥಿತರಿದ್ದು ಮಾತನಾಡಿದ ತ್ರಿಪುರಾ ವಿಧಾನ ಸಭೆಯ ಉಪ ಸಭಾಧ್ಯಕ್ಷರಾದ ಭಿಮಾನ್ ಸಿಂಘೆಯವರು ಕೇಂದ್ರ ಸರಕಾರದ ಜನವಿರೋಧಿ ನೀತಿಯಿಂದಾಗಿ ಉಲ್ಬಣಿಸಿರುವ ಪರಿಸ್ಥಿತಿಗಳ ಬಗ್ಗೆ ವಿವರಿಸಿ ಮಾತನಾಡಿದರು.

ಮೊದಲಿಗೆ ಎಸ್. ಎಫ್. ಐ. ಮೈಸೂರು ಜಿಲ್ಲಾ ಕಾರ್ಯದರ್ಶಿ ಎಸ್. ಆರ್. ಲೀಲಾವತಿ ಸ್ವಾಗತಿಸಿದರು. ಸಿ. ಪಿ. ಐ. (ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎನ್. ಕೆ. ಉಪಾಧ್ಯಾಯರೂ ಸಭೆಯಲ್ಲಿ ಉಪಸ್ಥಿತರಿದ್ದರು.

ಡಿ. ವೈ. ಎಫ್. ಐ. ಸಭೆ

ಡಿ. ವೈ. ಎಫ್. ಐ. ಮೈಸೂರು ಘಟಕದ ಆಶ್ರಯದಲ್ಲಿ 27-11-86 ರಂದು ಮೈಸೂರು ನಗರದ ವಿವಿಧ ಬಡಾವಣೆಗಳಲ್ಲಿ ಬೀದಿ ಬದಿಯ ಸಭೆಗಳನ್ನು ನಡೆಸಿ ಪಶ್ಚಿಮ ಬಂಗಾಳದಲ್ಲಿ "ಗೂರ್ಖಾ ಲ್ಯಾಂಡ್" ಹೆಸರಿನಲ್ಲಿ ಮೂಡಿ ಬಂದಿರುವ ಪ್ರತ್ಯೇಕತಾವಾದಿ ಚಳುವಳಿಗಳನ್ನು ತೀವ್ರವಾಗಿ ಖಂಡಿಸಲಾಯಿತು. ಸಭೆಗಳಲ್ಲಿ ಜನ ಉತ್ಸುಕತೆಯಿಂದ ಭಾಗವಹಿಸಿದ್ದರು.

ಸಮಸ್ಯೆಗಳನ್ನು ಪರಿಹರಿಸಿರೆಂದರೆ ಸೆರೆ ಮನೆಗೆ ದೂಡಿದರು

ಅಪರೂಪಕೊಮ್ಮೆ ಅತಿಥಿಗಳಂತೆ ತಮ್ಮ ಹಳ್ಳಿಗೆ ಬಂದ ತಹಶೀಲ್ದಾರನಿಗೆ ಬೇಡಿಕೆಗಳ ಮನವಿ ಸಲ್ಲಿಸಲು ಹೋದ ಡಿ. ವೈ. ಎಫ್. ಐ. ಯ ಕಾರ್ಯಕರ್ತನಿಗೆ ತಹಶೀಲ್ದಾರ್ ಖುದ್ದಾಗಿ ಥಳಿಸಿದ್ದಲ್ಲದೇ ಪೋಲೀಸರಿಂದಲೂ ಹೊಡೆಸಿ ಸೆರೆಮನೆಗಟ್ಟಿದ ದಾರುಣ ಘಟನೆ ಬಳ್ಳಾರಿ ಜಿಲ್ಲೆಯ ಕೂಡ್ಲೀಗಿ ತಾಲ್ಲೂಕಿನಲ್ಲಿ ನಡೆದಿದೆ.

ಕೂಡ್ಲೀಗಿ ತಾಲೂಕಿನ ಹಾಲು ಸಾಗರಕ್ಕೆ ತಾಹಶೀಲ್ದಾರ ಎಸ್. ಎಸ್. ಪಾಟೀಲ್ ಬಂದರು. ಡಿ. ವೈ. ಎಫ್. ಐ. ಯ ಕಾರ್ಯಕರ್ತರಾಗಿರುವ ಕಾ॥ ಪಾಪಣ್ಣ ನವರು ತಮ್ಮ ಗ್ರಾಮದಲ್ಲಿರುವ ಸಮಸ್ಯೆಗಳನ್ನು ಪರಿಹರಿಸಲು ಬೇಡಿಕೆಗಳ ಮನವಿಯನ್ನು ನೀಡಿದರು. ಮಳೆಗಾಲದಲ್ಲಿ ಉಂಟಾಗುವ ಪ್ರವಾಹವನ್ನು ತಡೆಗಟ್ಟ ವಡ್ಡು ಹಾಕಿಸ ಬೇಕೆಂದೂ, ಬೀದಿ ದೀಪಗಳ ವ್ಯವಸ್ಥೆ ಕಲ್ಪಿಸಬೇಕೆಂದೂ, ಈಗಾಗಲೇ ಕೂಡ್ಲೀಗಿಯ ಕಾಂಗ್ರೆ ಶಾಸಕರ ಪ್ರಭಾವದಿಂದ ಒಂದೇ ಕುಟುಂಬದ ಮೂವರಿಗೆ ಮನೆಗಳನ್ನು ಹಂಚಲಾದ ವಿಷಯುವನ್ನು ತಹಶೀಲ್ದಾರ್ ಗಮನಕ್ಕೆ ತಂದು ಅದನ್ನು ಸರಿಪಡಿಸಬೇಕೆಂದು ವಿನಂತಿಸಿಕೊಂಡರು. ಪಟ್ಟಭದ್ರ ಹಿತಾಸಕ್ತಿಗಳಿಗೆ ಅಧಿಕಾರಿಗಳು ಮಣಿದು ಕರೆಯನ್ನು ರಿಪೇರಿ ಮಾಡಿಸದೇ ಇರುವ ಹಣದ ವಂಚನೆಯ ಪ್ರಕರಣವನ್ನು ವಿವರಿಸಲಾಯಿತು. ಇದರಿಂದ ಕುಪಿತಗೊಂಡ ತಹಶೀಲ್ದಾರ್ ಮನವಿ ಪತ್ರವನ್ನು ಹರಿದು ಹಾಕಿ ಬಿಸುಟನಲ್ಲದೇ ಬಾಯಿಗೆ ಬಂದಂತೆ ಅವ್ಯಾಚ ಶಬ್ದಗಳಿಂದ ಬೈದನು. ಅಲ್ಲದೆ ಜೀಪನ್ನು ಹತ್ತಲು ಒತ್ತಾಯಿಸಿದನು.

ಜೀಪ್ ಹತ್ತದೇ ಪ್ರತಿಭಟಿಸಿದಾಗ ಒಂದು ಕೈ ನೋಡಿಕೊಳ್ಳುತ್ತೀನೆಂದು ನುಡಿಯುತ್ತಲೇ ಹೋದ ತಹಶೀಲ್ದಾರ್ ಪಕ್ಕದ ಗುಡೇಕೋಟೆಯ ಪೊಲೀಸ್ ಸ್ಟೇಷನಿಂದ ಪೋಲೀಸ್ ಜೀಪ್ ಕಳಿಸಿದನು. ತಮ್ಮ ಪತ್ನಿ ಮತ್ತು ಮಕ್ಕಳನ್ನು ಊರಿಗೆ ಕರೆದುಕೊಂಡು ಹೋಗಲು ಬಸ್ ನಿಲ್ದಾಣದಲ್ಲಿ ನಿಂತಿದ್ದ ಕಾ॥ ಪಾಪಣ್ಣನವರನ್ನು ಪೋಲೀಸ್ ಠಾಣೆಗೆ ಜೀಪಿನಲ್ಲಿ ಎಳೆದೊಯ್ದರು, ಅಲ್ಲಿಯ ತಹಶೀಲ್ದಾರ್ ಪಾಟೀಲ್ ಮತ್ತು ಪೋಲೀಸ್ ಪೇದೆಗಳು ಅಮಾನುಷವಾಗಿ ಥಳಿಸಿ ಲಾಕಪ್‌ಗೆ ಹಾಕಿದರು. ಅಲ್ಲದೇ ಪ್ರಾಣ ಭೀತಿಯ ಬೆದರಿಕೆ ಒಡ್ಡಿ ಕೋರ್ಟಿನಲ್ಲಿ ತಪ್ಪೊಪ್ಪಿ ಕೊಳ್ಳುವಂತೆ ಮಾಡಿದ್ದಾನೆ.

ತಹಶೀಲ್ದಾರ್ ಅವರ ಕೆಲಸ ಕಾರ್ಯಗಳಿಗೆ ಅಡ್ಡಿ ಮಾಡಿದ್ದಾನೆನ್ನುವ ಸುಳ್ಳು ಮೊಕದ್ದಮೆಯನ್ನಯು ನ್ಯಾಯಾಧೀಶರು ಒಂದು ವಾರದ ಕಾಲ ಜೇಲಿನಲ್ಲಿರಿಸಿದರಲ್ಲದೇ ರೂ 300/- ಗಳನು. ದಂಡ ವಿಧಿಸಿದ್ದಾರೆ.

ಈ ಘಟನೆಯನ್ನು ತಿಳಿದ ತಕ್ಷಣ ಡಿ. ವೈ. ಎಫ್. ಐ. ಮತ್ತು ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಕಾರ್ಯದರ್ಶಿಗಳಾದ ಕಾ॥ ಜಂಬಯ್ಯ ನಾಯಕ್ ಹಾಗು ಕಾ॥ ಪಿ. ಆರ್ ವೆಂಕಟೇಶ್ ಅವರು ಹಾಲು ಸಾಗರಕ್ಕೆ ಭೇಟಿ ನೀಡಿದರು.

ಶಿವಮೊಗ್ಗದಲ್ಲಿ ಡಿ. ವೈ. ಎಫ್. ಐ. ಸಮ್ಮೇಳನ

1987 ರ ಏಪ್ರಿಲ್‌ನಲ್ಲಿ ಡಿ. ವೈ. ಎಫ್. ಐ. ನ ಕರ್ನಾಟಕ ರಾಜ್ಯ ಸಮ್ಮೇಳನವನ್ನು ಶಿವಮೊಗ್ಗದಲ್ಲಿ ನಡೆಸಲಾಗುವುದೆಂದು ಡಿ. ವೈ. ಎಫ್. ಐ. ನ ಪ್ರಕಟನೆ ತಿಳಿಸಿದೆ. ಅಲ್ಲದೆ ಅದೇ ಸಂದರ್ಭದಲ್ಲಿ 20 ಸಾವಿರ ಯುವ ಜನರ ಮೆರವಣಿಗೆಯನ್ನು ನಡೆಸಲಾಗುವುದೆಂದು ಡಿಸೆಂಬರ್ 4 ರಂದು ಬೆಂಗಳೂರಿನಲ್ಲಿ ನಡೆದ ರಾಜ್ಯ ಡಿ. ವೈ. ಎಫ್. ಐ. ನ ಪದಾಧಿಕಾರಿಗಳ ಸಭೆಯಲ್ಲಿ ತೀರ್ಮಾನಿಸಲಾಗಿದೆ. 1986 ರ ಸದಸ್ಯತ್ವವನ್ನು ಜನವರಿ 1987 ರ ಮೊದಲ ವಾರದೊಳಗೆ ತಲುಪಿಸಬೇಕೆಂಬ, ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳಲ್ಲಿ ಎಡ-ಪ್ರಜಾಸತ್ತಾತ್ಮಕ ಪಕ್ಷಗಳ ಮತ್ತು ಪ್ರಗತಿಪರ ಸ್ವತಂತ್ರ ಅಭ್ಯರ್ಥಿಗಳಿಗೆ ಬೆಂಬಲ ನೀಡಬೇಕೆಂಬ, 1987 ರ ಫೆಬ್ರವರಿ ಮೊದಲ ವಾರದಲ್ಲಿ ಡಿ.ವೈ. ಎಫ್. ಐ. ನ ಮುಖಂಡರಿಗೆ ಮತ್ತಿತರ ಕಾರ್ಯಕರ್ತರಿಗೆ ಮೊದಲ ದಿನಗಳ ತರಬೇತಿ ಶಿಬಿರ ನಡೆಸಬೇಕು ರಾಜ್ಯ ಸಮಿತಿಗೆ 30 ಸಾವಿರ ರೂಪಾಯಿಗಳ ನಿಧಿಯನ್ನು ಸಂಗ್ರಹಿಸುವುದು, ಮುಂದಿನ ವರ್ಷದ ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳ ನಡುವಿನ ಅವಧಿಯಲ್ಲಿ ಸದಸ್ಯತ್ವ ನೊಂದಾಯಿಸುವುದು ಮತ್ತು ಒಂದು ನೂರು ಯುವಕರಿಗೆ ಹರಿಹರದಲ್ಲಿ ಮೂರು ದಿನಗಳ ಅಧ್ಯಯನ ಶಿಬಿರ ನಡೆಸುವುದು ಮುಂತಾದ ತೀರ್ಮಾನಗಳನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆಯೆಂದು ಪ್ರಕಟನೆ ತಿಳಿಸಿದೆ. ಗೂರ್ಖಾ ಲ್ಯಾಂಡ್ ಚಳವಳಿಗಾರರಿಂದ ಕೊಲೆ ಗೀಡಾಗಿರುವ ಎಂಟು ಮಂದಿ ಡಿ. ವೈ. ಎಫ್. ಐ. ಸಂಗಾತಿಗಳ ಕುಟುಂಬಕ್ಕೆ ಧನ ಸಹಾಯ ಮಾಡಲು ನಿಧಿ ಸಂಗ್ರಹಿಸುವುದು ಸಹ ತೀರ್ಮಾನದಲ್ಲಿ ಸೇರಿದೆ.

ಶರದ್ ಜೋಷಿ ಬಂಧನ – ಸಿ. ಐ. ಟಿ. ಯು. ಖಂಡನೆ

ಶ್ರೀ ಶರದ್ ಜೋಶಿ ಮತ್ತಿತರರು ಹತ್ತಿ ಬೆಳೆಗೆ ನ್ಯಾಯಯುತ ಬೆಲೆಯನ್ನು ನಿಗದಿಗೊಳಿಸಬೇಕು ಮತ್ತು ಸರ್ಕಾರವೇ ಹತ್ತಿಯನ್ನು ಕೊಂಡು ಕೊಳ್ಳಬೇಕೆಂದು ಮಹಾರಾಷ್ಟ್ರದಲ್ಲಿ ಚಳವಳಿ ನಡೆಸುತ್ತಿದ್ದಾರೆ. ಮಹಾರಾಷ್ಟ್ರ ಸರ್ಕಾರವು ರಾಷ್ಟ್ರೀಯ ಭದ್ರತಾ ಕಾಯಿದೆಯನ್ನು ಚಳವಳಿಗಾರರ ಮೇಲೆ ಪ್ರಯೋಗಿಸಿ ಅವರನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿಟ್ಟಿರುವುದನ್ನು ಸಿ.ಐ.ಟಿ.ಯು.ನ ಪ್ರಧಾನ ಕಾರ್ಯದರ್ಶಿ ಕಾ. ಸಮರ್‌ಮುಖರ್ಜಿ ಖಂಡಿಸಿದ್ದಾರೆ. ತಮ್ಮ ಬೇಡಿಕೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು ಮಾಡಿದ ಪ್ರಯತ್ನಗಳು ವಿಫಲಗೊಂಡ ನಂತರ ಮಹಾರಾಷ್ಟ್ರದ ಎಲ್ಲಾ ಹತ್ತಿ ಬೆಳೆಗಾರರು ಮತ್ತು ಕೃಷಿ ಕೂಲಿಗಾರರು ಚಳುವಳಿಯ ಮಾರ್ಗ ಹಿಡಿದಿದ್ದಾರೆಂಬುದಾಗಿ ಕಾ॥ ಸಮರ್ ಮುಖರ್ಜಿಯವರು ತಮ್ಮ ಹೇಳಿಕೆಯಲ್ಲಿ ತಿಳಿಸಿದಾರೆ.

ಕೇಂದ್ರ ಸರ್ಕಾರವು ಕೂಡಲೇ ಮಧ್ಯ ಪ್ರವೇಶಿಸಿ ಹತ್ತಿ ಬೆಳೆಗಾರರಿಗೆ ಸೂಕ್ತ ಬೆಲೆಯನ್ನು ಮತ್ತು ಕೃಷಿ ಕಾರ್ಮಿಕರಿಗೆ ಸಮರ್ಪಕ ಕೂಲಿಯನ್ನು ನಿರ್ಧರಿಸಬೇಕೆಂದೂ ಮತ್ತು ಸರ್ಕಾರವೇ ಹತ್ತಿಯನ್ನು ಕೊಳ್ಳಲು ಕೂಡಲೇ ವ್ಯವಸ್ಥೆ ಮಾಡಬೇಕೆಂದು ಮತ್ತು ಬಂಧಿತರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಸಿ.ಐ.ಟಿ.ಯು. ಒತ್ತಾಯಿಸಿದೆ. ಮಹಾರಾಷ್ಟ್ರದ ಕಾರ್ಮಿಕ ವರ್ಗ ರೈತರು ನಡೆಸುತ್ತಿರುವ ಹೋರಾಟಕ್ಕೆ ಸಕ್ರಿಯ ಬೆಂಬಲ ವ್ಯಕ್ತಪಡಿಸಬೇಕೆಂದು ಮನವಿ ಮಾಡಿದೆ.

ಅಂತರರಾಷ್ಟ್ರೀಯ

ಶ್ವೇತ ಭವನದ ಹಿಂದಿನ ಕೊಳಚೆ - ಇರಾನ್ ಹಗರಣ

ಕಂತು ಕಂತಾಗಿ ದಿನನಿತ್ಯವೂ ಹೊರ ಬರುತ್ತಿರುವ 'ಇರಾನ್ ಗೇಟ್' ಪ್ರಕರಣದ ಕಥೆಗಳು ವಿಶ್ವದಲ್ಲಿಯೇ ಅತ್ಯಂತ ಉಚ್ಚ ಪ್ರಜಾಸತ್ತೆಯೆಂದು ಕೊಚ್ಚಿಕೊಳ್ಳುವ ಅಮೆರಿಕದ ಅಸಹ್ಯ ಮುಖವನ್ನು ಬಯಲು ಮಾಡಿದೆ. ಈ ಕ್ರೂರ ವರ್ತನೆ, ಮರೆ ಮೋಸಗಳು ಅಮೆರಿಕದ ಜನತೆಯನ್ನು, ಇಡೀ ವಿಶ್ವದ ಜನತೆಯನ್ನು ದಿಗ್ಭ್ರಮೆಗೊಳಿಸಿವೆ. ರೀಗನ್ನರ ಮಾನ ದಿನದಿನವೂ ಹರಾಜಾಗುತ್ತಾ ನಡೆದಿದೆ.

ಹಲವಾರು ವರ್ಷಗಳಹಿಂದೆ ವಾಟರ್ ಗೇಟ್ ಹಗರಣ ಜಗತ್ತನ್ನು ದಿಗ್ಭ್ರಮೆಗೊಳಿಸಿತು. ಅಂದಿನ ಅಧ್ಯಕ್ಷ ನಿಕ್ಸನ್‌ನ ಪದಚ್ಯುತಿಗೇ ಕಾರಣವಾಯಿತು, ಈಗ ಅದಕ್ಕಿಂತಲೂ ಗಂಭೀರವಾದ 'ಇರಾನ್ ಗೇಟ್' ಹಗರಣವೊಂದು ಬೆಳಕಿಗೆ ಬಂದಿದೆ.

ಲೆಬನಾನ್ ಮತ್ತು ಇರಾನ್‌ನಲ್ಲಿ ಬಂಧಿತರಾಗಿರುವ ಕೆಲವರು ಒತ್ತೆಯಾಳುಗಳನ್ನು ಬಿಡಿಸಿಕೊಳ್ಳುವ ಸಲುವಾಗಿ ಅಮೇರಿಕದ ಅಧ್ಯಕ್ಷ ರೋನಾಲ್ಡ್ ರೇಗನ್‌ರವರ ಅಪ್ಪಣೆಯಂತೆ ಅಮೇರಿಕಾದ ರಕ್ಷಣಾ ಸಲಹೆಗಾರರಾದ್ದ ಆಲಿವರ್ ನಾರ್ತ್ ಮತ್ತು ಶ್ವೇತಭವನದ ಅಧಿಕಾರಿ ರಾಬರ್ಟ್ ಮೆಕ್ ಫಾರ್ಲೆನ್ ಮೊದಲಾದವರು ಇರಾನಿನ ಸರಕಾರಕ್ಕೆ ಕೋಟ್ಯಾಂತರ ಡಾಲರು ಲಂಚಕೊಡುವ ಪ್ರಯತ್ನ ನಡೆಸುತ್ತಿದ್ದಾರೆಂದು ಅಮೇರಿಕದ ಪತ್ರಕರ್ತ ಜಾಕ್ ಎಂಡರ್ಸನ್, ಬಹಿರಂಗ ಗೊಳಿಸಿದ್ದಾರೆ. ಅಮೇರಿಕನ್ ಆಡಳಿತೆ ಇಸ್ರೇಲಿನ ಮುಖಾಂತರ ಹಲವಾರು ಬಿಲಿಯ ಡಾಲರ್ ಮೊತ್ತದ ಆಧುನಿಕ ಮಾರಕಾಸ್ತ್ರಗಳನ್ನು ಇರಾನಿಗೆ ನೀಡಿ ಈಗ ಐದಾರು ವರ್ಷಗಳಿಂದ ನಡೆಯುತ್ತಿರುವ ಇರಾನ್-ಇರಾಕ್ ಯುದ್ಧದಲ್ಲಿ ಇರಾನ್ ಕೈ ಬಲಪಡಿಸಿ ಅದರ ಮನವೊಲಿಸುವ ಪ್ರಯತ್ನ ಮಾಡಿದೆ. ಇರಾನಿನ ಖೊಮೆನಿ ಆಧಿಪತ್ಯದ ಜೊತೆಗೆ ಸಂಬಂಧ ಸುಧಾರಿಸಿಕೊಳ್ಳುವುದು ಈ ವ್ಯವಹಾರದ ಉದ್ದೇಶವೆನ್ನಲಾಗಿದೆ.

ಇನ್ನೊಂದು ಅಂಶವೆಂದರೆ ಇರಾನಿಗೆ ಮಾರಾಟಮಾಡಿದ ಈ ಇಡೀ ಹಗರಣದಲ್ಲಿ ವಿಶ್ವವನ್ನು ದಂಗು ಬಡಿಸಿದ ಶಸ್ತ್ರಾಸ್ತ್ರಗಳ ಹಣವನ್ನು ವಿಶ್ವ ಪ್ರಸಿದ್ಧ ಸ್ವಿಸ್ ಬ್ಯಾಂಕುಗಳಲ್ಲಿನ ಗುಪ್ತ ಲೆಕ್ಕದ ಮೂಲಕ ಅದನ್ನು ನಿಕರಾಗುವ ಭಯೋತ್ಪಾದಕ ಕಾಂಟ್ರಾಗಳಿಗೆ ಸರಬರಾಜು ಮಾಡಲಾಗಿದೆ.

ಅಮೇರಿಕಾದ ಪತ್ರಿಕಾ ಬಳಗದ ಒಂದು ವಿಭಾಗ ಹೊರತರುವ ಈ ಪ್ರಸಂಗಗಳ ಜೊತೆಗೆ ಅಮೇರಿಕಾದ ಸಂಸತ್ತಿನ ಕೆಳಸದನದ ಕಾಂಗ್ರೆಸ್‌ನ ವಿದೇಶಾಂಗ ನೀತಿ ಸಮಿತಿಯ ವಿಚಾರಣೆಗಳು ಇವೆಲ್ಲವೂ, ಮತ್ತೆ ಮತ್ತೆ ಶ್ವೇತ ಭವನದ ಸುತ್ತಮುತ್ತವೇ ಸುತ್ತುತ್ತಾ ಇವೆ. ಜನಾಭಿಪ್ರಾಯದ ಒತ್ತಡಕ್ಕೆ ತಲೆ ಬಾಗಿ ರೇಗನ್ ವಿಶೇಷ ವಿಚಾರಣೆಯನ್ನು ನಡೆಸುವೆನೆಂದು ಘೋಷಿಸಬೇಕಾಗಿದೆ. ಹಗರಣದ ಎಲ್ಲಾ ಪಾಪಗಳನ್ನು ಆಲಿವರ್ ನಾರ್ತ್ ಎಂಬ ಸಣ್ಣ ಅಧಿಕಾರಿಯೊಬ್ಬನ ತಲೆಗೆ ಸುತ್ತಿ ಉಳಿದ ನೀಚರು, ಮಿಲಿಟರಿ ಕೈಗಾರಿಕಾ ಮಾಲಿಕರು ಒತ್ತೆಯಾಳುಗಳಾದ ಅಧಿಕಾರಿಗಳು ಹಾಗೂ ರೇಗನ್ ಬಚಾವಾಗಲು ಪ್ರಯತ್ನ ನಡೆಸಿದ್ದಾರೆ. ಈ ಹಗರಣದಲ್ಲಿ ಸಂಬಂಧಿಸಿದ ರಾಷ್ಟ್ರ ರಕ್ಷಣಾ ಸಲಹೆಗಾರ ಪಾಯಿಂಟ್ ಡೆಕ್ಸ್‌ಟರ್ ರಾಜಿನಾಮೆ ನೀಡಬೇಕಾಗಿ ಬಂದಿದೆ.

ಅತ್ಯಂತ ಭಯೋತ್ಪಾದಕ ದೇಶ ಇರಾನ್‌ಗೆ ತಾನು ಯಾವುವೇ ರೀತಿಯಲ್ಲಿ ಬೆಂಬಲ ನೀಡುವುದಿಲ್ಲ, ನೀವು ಯಾರೂ ನೀಡಬಾರದು ಎಂದು ಪಾಶ್ಚಿಮಾತ್ಯ ದೇಶಗಳನ್ನು ಪ್ರತಿಬಂಧಿಸುತ್ತಿದ್ದ ರೇಗನ್‌ನ ಅಮೇರಿಕಾ ಸರಕಾರದ ಮಾತುಗಳನ್ನು ಇನ್ನು ಮುಂದೆ ಹೇಗೆ ನಂಬುವುದೆಂಬುವುದು ವಿಶ್ವದಸರಕಾರಗಳ, ಜನತೆಯ ಮುಂದಿರುವ ಪ್ರಶ್ನೆ.

ನಿಕರಾಗುವ ವಿರುದ್ಧದ ದಂಗೆಕೋರ ಕಾಂಟ್ರಾಗಳಿಗೆ ಯಾವುದೇ ರೀತಿಯ ಶಸ್ತ್ರಾಸ್ತ್ರನೆರವು ನೀಡಬಾರದು ಎಂದು ಅಮೇರಿಕದ ಸಂಸತ್ ಪ್ರತಿಬಂಧಿಸಿದ್ದರೂ ಇಷ್ಟೆಲ್ಲಾ ಅನಾಚಾರಗಳನ್ನು ಮಾಡಿ ಅವರಿಗೆ ಕೋಟಿಗಟ್ಟಲೆ ಹಣದ ನೆರವನ್ನು ನೀಡುತ್ತಿರುವ ಈ ಸರಕಾರದ ಮಾತನ್ನು ಅಮೇರಿಕದ ಜನತೆ ಹೇಗೆ ನಂಬುವುದು ಎಂಬುದು ಇನ್ನೊಂದು ಪ್ರಶ್ನೆ. ಅಮೇರಿಕಾದ ಜನತೆಯನ್ನು ತನ್ನ ನಟನೆಯಿಂದ ವಂಚಿಸುತ್ತಿದ್ದ ರೇಗನ್‌ನ ನಟನೆ ಇನ್ನು ನಡೆಯುತ್ತದೆಯೆ ?

ಈ ನಂಬಿಕೆ ದ್ರೋಹಿ ಜನದ ಕೈಯಲ್ಲಿಯೇ ವಿಶ್ವವನ್ನು ಅನೇಕ ಬಾರಿ ನಾಶಪಡಿಸುವ ಅಣು ಶಸ್ತ್ರಾಸ್ತ್ರಗಳ ಕೀಲಿ ಕೈ ಇದೆ ಎನ್ನುವುದನ್ನು ನೆನಸಿಕೊಂಡರೆ ವಿಶ್ವದ ಎಲ್ಲಾ ಶಾಂತಿಪ್ರಿಯ ಜನತೆಗೆ ಏನೆನ್ನಿಸಬಹುದು ?

ಬೀಡಿ ಕಾರ್ಮಿಕರ ಸವಲತ್ತುಗಳು

ಸರ್ಕಾರ ಈಗಲಾದರೂ ಗಮನಿಸಲಿ

ಬೀಡಿ ಕಾರ್ಮಿಕರ ಜೀವನವನ್ನು ಸುಧಾರಿಸಿ ಅವರ ಆರ್ಥಿಕ ಅಗತ್ಯಗಳನ್ನು ಪೂರೈಸುವ ಉದ್ದೇಶದಿಂದ ಕೇಂದ್ರ ಸರಕಾರವು ಬೀಡಿ ಕಾರ್ಮಿಕರ ಕಲ್ಯಾಣ ನಿಧಿಯನ್ನು ಸ್ಥಾಪಿಸಿದೆ. ಬೀಡಿ ಕಾರ್ಮಿಕರ ವಸತಿ, ಆರೋಗ್ಯ, ವಿದ್ಯಾಭ್ಯಾಸ ಮುಂತಾದ ವಿಷಯಗಳಲ್ಲಿ ನೆರವು ನೀಡುವ ದೃಷ್ಟಿಯಿಂದ ನಿರ್ದಿಷ್ಟ ಮೊತ್ತದ ಹಣವನ್ನು ತೆಗೆದಿರಿಸಲಾಗುತ್ತದೆ. ಆದರೆ ಕರ್ನಾಟಕ ಸರ್ಕಾರವು ಈ ಸೌಲಭ್ಯವನ್ನು ಉಚಿತ ರೀತಿಯಲ್ಲಿ ಬಳಸಿಕೊಳ್ಳಲು ತಕ್ಕಂತಹ ವಿಧಾನಗಳನ್ನು ರೂಪಿಸದಿರುವುದರಿಂದ ಬಡ ಬೀಡಿ ಕಾರ್ಮಿಕರು ಕಲ್ಯಾಣ ನಿಧಿಯಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ರಾಜ್ಯ ಸರ್ಕಾರ ಈ ಬಗ್ಗೆ ಗಂಭೀರವಾಗಿ ಚಿಂತಿಸಿದ್ದಲ್ಲಿ ಅಸಂಖ್ಯಾತ ಬೀಡಿ ಕಾರ್ಮಿಕರಿಗೆ ಅನುಕೂಲವಾಗುತ್ತಿತ್ತು.

ಕಾರ್ಮಿಕರಿಗೆ ಮನೆ

ಬೀಡಿ ಕಾರ್ಮಿಕರಿಗೆ ಸ್ವಂತ ಮನೆ ಕಟ್ಟಿಕೊಳ್ಳಲು ಕಲ್ಯಾಣ ನಿಧಿಯಿಂದ 10 ಸಾವಿರ ರೂಪಾಯಿಗಳನ್ನು ಕೊಡಬೇಕೆಂಬ ನಿಯಮವಿದೆ. ಇದರಲ್ಲಿ 2000 ರೂಪಾಯಿಗಳನ್ನು ಹಿಂತಿರುಗಿಸಬೇಕಾಗಿಲ್ಲ. ಉಳಿದ 8,000 ರೂಗಳನ್ನು 12 ವರ್ಷಗಳ ಅವಧಿಯೊಳಗೆ ಹಿಂತಿರುಗಿಸಬೇಕು. ಈ 10,000 ರೂಪಾಯಿ ಪಡೆದುಕೊಳ್ಳಬೇಕಾದರೆ ಬೀಡಿ ಕಂಪೆನಿಯ ಮಾಲಕರು ಭದ್ರತೆಯನ್ನು ಕೊಡ ಬೇಕಾಗುತ್ತದೆ. ಆದರೆ ಕರ್ನಾಟಕದ ಬೀಡಿ ಕೈಗಾರಿಕೆಯಲ್ಲಿ ಕಂಟ್ರಾಕ್ಟ್ ಪದ್ಧತಿ ಇರುವುದರಿಂದ ಮಾಲಕರು ಕಾರ್ಮಿಕರಿಗೆ ಭದ್ರತೆಯನ್ನು ಕೊಡುತ್ತಿಲ್ಲ. ಇದರಿಂದಾಗಿ ರಾಜ್ಯದ ಬೀಡಿ ಕಾರ್ಮಿಕರು ಈ ಸವಲತ್ತಿನಿಂದ ವಂಚಿತರಾಗಿದ್ದಾರೆ.

ಇದಲ್ಲದೆ ಆರ್ಥಿಕವಾಗಿ ತೀರಾ ಹಿಂದುಳಿದ ಬೀಡಿ ಕಾರ್ಮಿಕರಿಗೆ ಗೃಹ ನಿರ್ಮಾಣ ಸಹಕಾರಿ ಸಂಘಗಳ ಅಥವ 'ಹುಡ್ಕೊ' ಯೋಜನೆಯ ಮೂಲಕ ರಾಜ್ಯ ಸರ್ಕಾರಗಳು ಮನೆ ಕಟ್ಟಿಸಿ ಕೊಡುವ ಸೌಲಭ್ಯವಿದೆ. ಕೇಂದ್ರ ಸರಕಾರವು ಇದಕ್ಕಾಗಿ 1984ನೇ ಸಾಲಿಗೆ 282 ಮನೆ ಕಟ್ಟಿಸಲು 8 ಲಕ್ಷದ 42,000 ರೂಪಾಯಿಯನ್ನು ಕರ್ನಾಟಕ ರಾಜ್ಯಕ್ಕಾಗಿ ತೆಗೆದಿರಿಸಿತ್ತು. ಈ ಹಣದಲ್ಲಿ ಪ್ರತಿ ಮನೆಗೆ ರೂ 5000 ದಂತೆ ಉಪಯೋಗಿಸಬೇಕು ಹೆಚ್ಚಿಗೆ ಬೇಕಾದ ಹಣವನ್ನು ರಾಜ್ಯ ಸರ್ಕಾರ ಒದಗಿಸಬೇಕು ಎಂದೂ ಸಹ ಸೂಚಿಸಲಾಗಿತ್ತು.

ಕರ್ನಾಟಕ ಸರ್ಕಾರವು ಇದಕ್ಕಾಗಿ ಭೂಮಿಯನ್ನು ಸಿಗದಿ ಮಾಡಿದೆಯಾದರೂ ಮನೆ ಕಟ್ಟಿಸಲು ಬೇಕಾದ ಯೋಜನೆ ಯನ್ನು ರೂಪಿಸದಿರುವುದರಿಂದಾಗಿ ಈ ಬಗ್ಗೆ ಯಾವುದೇ ತೀರ್ಮಾನ ಕೈಗೊಳ್ಳಲಾಗದೆ ಇಲ್ಲಿಯವರೆಗೆ ಒಂದೇ ಒಂದು ಮನೆಯನ್ನು ಕೂಡ ಕಟ್ಟಿಸಲಿಲ್ಲ.

ಕಲ್ಯಾಣ ನಿಧಿಯು ಬೀಡಿ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅನೇಕ ಸವಲತ್ತುಗಳನ್ನು ಮೀಸಲಿರಿಸಿದೆ. 1 ನೇ ತರಗತಿಯಿಂದ 6 ನೇ ತರಗತಿ ವರೆಗೆ 120 ರೂಪಾಯಿ ವಿದ್ಯಾರ್ಥಿ ವೇತನ, 7 ನೇ ತರಗತಿಯಿಂದ 10 ನೇ ತರಗತಿಯ ವರೆಗೆ 360 ರೂ, ಪಿ. ಯು. ಸಿ. ಗೆ 600 ರೂ, ಪದವಿ ತರಗತಿಗಳಿಗೆ 900 ರೂ, ವೈದ್ಯಕೀಯ ಅಥವಾ ಎಂಜಿನಿಯರಿಂಗ್ ಶಿಕ್ಷಣಕ್ಕೆ 1500 ರೂಪಾಯಿಗಳ ವಿದ್ಯಾರ್ಥಿ ವೇತನ ವನ್ನು ನೀಡುವ ವ್ಯವಸ್ಥೆಯಿದೆ. 1 ನೇ ತರಗತಿಯ ಮಕ್ಕಳಿಗೆ 1 ಜತೆ ಶಾಲಾ ಸಮವಸ್ತ್ರ ನೀಡಲಾಗುತ್ತದೆ.

1985 ರಲ್ಲಿ ವಿದ್ಯಾರ್ಥಿ ವೇತನಕ್ಕಾಗಿ ರೂ 62,90,285 ನಿಗದಿ ಮಾಡಲಾಗಿತ್ತು. 1986 ರಲ್ಲಿ ಇದನ್ನು ಒಂದು ಕೋಟಿ ರೂಪಾಯಿಗಳಿಗೆ ಏರಿಸಲಾಗಿದೆ.

ಬೀಡಿ ಕಾರ್ಮಿಕರಿಗೆ ಹಲವಾರು ವೈದ್ಯಕೀಯ ಸೌಲಭ್ಯಗಳನ್ನು ನೀಡಲಾಗಿದ್ದು, ಸಂಚಾರಿ ಆಸ್ಪತ್ರೆಗಳನ್ನು ರೂಪಿಸಲಾಗಿದೆ. ಕ್ಷಯರೋಗ ಆಸ್ಪತ್ರೆಯಲ್ಲಿ ಬೀಡಿ ಕಾರ್ಮಿಕರಿಗಾಗಿ ಹಾಸಿಗೆಗಳನ್ನು ಒದಗಿಸಲಾಗುತ್ತದೆ. ಅಲ್ಲದೆ ಬೀಡಿ ಕಾರ್ಮಿಕರಿಗೆ ಕನ್ನಡಕಗಳನ್ನು ಕೊಂಡು ಕೊಳ್ಳಲು 50 ರೂ, ಗಳನ್ನು ಕೊಡಲಾಗುತ್ತದೆ. ಕ್ಯಾನ್ಸರ್, ಕುಷ್ಠ, ಮತ್ತು ಕ್ಷಯ, ರೋಗಿಗಳಿಗೆ ಚಿಕಿತ್ಸೆಯ ಪೂರ್ತಿ ಖರ್ಚನ್ನು ಕಲ್ಯಾಣ ನಿಧಿಯಿಂದ ಕೊಡಲಾಗುವುದು.

ಇನ್ನಾದರೂ ನಮ್ಮ ರಾಜ್ಯ ಸರ್ಕಾರ ಕಲ್ಯಾಣ ನಿಧಿಯ ಸವಲತ್ತುಗಳನ್ನು ಬಡ ಬೀಡಿ ಕಾರ್ಮಿಕರಿಗಾಗಿ ಪೂರ್ಣವಾಗಿ ಬಳಸಿಕೊಳ್ಳುವಂತೆ ಒತ್ತಾಯಿಸ ಬೇಕಾದ್ದು ಅನಿವಾರ್ಯ ವಾಗಿದೆ.

ಕುಷ್ಟಗಿ - ಡಿ. ವೈ. ಎಫ್. ಐ. ಸಮ್ಮೇಳನ

ಡಿ. ವೈ ಎಫ್. ಐ.ನ ಕುಷ್ಟಗಿ ತಾಲ್ಲೂಕು ಪ್ರಥಮ ಸಮ್ಮೇಳನ ಡಿಸೆಂಬರ್ 6ರಂದು ನಡೆಯಿತು. 60 ಪ್ರತಿನಿಧಿಗಳು ಪಾಲ್ಗೊಂಡಿದ್ದ ಈ ಸಮ್ಮೇಳನವನ್ನು ರಾಜ್ಯ ಕಾರ್ಯದರ್ಶಿ ಕಾ. ಎಸ್ ಶಿವರಾಂ ಉದ್ಘಾಟಿಸಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ಕಾ. ಮಹೇಶ್ ಮನ್ನಾಪುರ ವಹಿಸಿದ್ದರು. ಸಮ್ಮೇಳನವು ವಿಜಯನಗರ ಉಕ್ಕಿನ ಕಾರ್ಖಾನೆ ಮತ್ತು ಮಂಗಳೂರು ತೈಲಾಗಾರವನ್ನು ಕೂಡಲೇ ಪ್ರಾರಂಭಿಸಬೇಕೆಂಬ, ವಿಚ್ಛಿದ್ರಕಾರಿ ಚಳುವಳಿಗಳ ವಿರುದ್ಧ, ನಿರುದ್ಯೋಗಿಗಳಾದ ಸ್ವಯಂ ಉದ್ಯೋಗಾಕಾಂಕ್ಷಿಗಳಿಗೆ ಸಾಲ ನೀಡಬೇಕೆಂಬ, ದಿನಗೂಲಿ ಮತ್ತು ಸ್ಪೈಪಂಡರಿ ಅಭ್ಯರ್ಥಿಗಳನ್ನು ಖಾಯಂ ಗೊಳಿಸಬೇಕೆಂಬ ಮತ್ತು ಇನ್ನೂ ಇತರ ನಿರ್ಣಯಗಳನ್ನು ಅಂಗೀಕರಿಸಿತು. ಸಮ್ಮೇಳನವು 15 ಜನರ ಹೊಸ ಸಮಿತಿಯನ್ನು ಆಯ್ಕೆ ಮಾಡಿತು. ಕಾ. ಗಂಗಾಧರ ಕುಷ್ಟಗಿ ಅಧ್ಯಕ್ಷರಾಗಿ, ಕಾ. ಅಡಿವೆಪ್ಪ ನೆರಬೆಂಚಿ ಕಾರ್ಯದರ್ಶಿಯಾಗಿ ಕಾ. ವೀರೇಶ ತುರುಕಾಣಿ ಮೆಹಬೂಬಸಾಬ್ ಗ್ಯಾನಪ್ಪ ಮತ್ತು ಶರಣಪ್ಪ, ಜೋಡಿದಾಗ, ಸಹ ಕಾರ್ಯದರ್ಶಿಗಳಾಗಿ ಆಯ್ಕೆಯಾಗಿದ್ದಾರೆ.

ತಿಂಡಿ ದರಗಳನ್ನು ಇಳಿಸಿ

ಕರ್ನಾಟಕ ರಾಜ್ಯ ಸರ್ಕಾರದೊಂದಿಗೆ ಕರ್ನಾಟಕ ಪ್ರದೇಶ ಹೋಟೇಲ್ ಮಾಲೀಕರ ಸಂಘವು ಮಾಡಿಕೊಂಡ ಒಪ್ಪಂದದಂತೆ ತಿಂಡಿ, ಕಾಫಿ-ಟೀ, ಊಟದ ದರಗಳನ್ನು ಹೊಸಪೇಟೆಯಲ್ಲಿಯೂ .05 ಪೈಸೆಯಿಂದ 0.50 ಪೈಸೆಯವರೆಗೆ ಇಳಿಸಬೇಕೆಂದು ಒತ್ತಾಯಿಸಿ ಡಿವೈಎಫ್‌ಐ, ಎಸ್. ಎಫ್. ಐ. ಪ್ರಾಂತ ರೈತ ಸಂಘ, ವಿಕಾಸ ಯುವಕ ಮಂಡಳಿ ಮತ್ತಿತರೆ ನಾಗರೀಕ ಹಾಗೂ ಯುವಜನರ ಸಂಘಟನೆಗಳನ್ನೊಳಗೊಂಡ ಜಂಟಿ ಹೋರಾಟ ಸಮಿತಿ ತೀವ್ರತರವಾದ ಚಳುವಳಿಯನ್ನು ರೂಪಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ದಕ್ಷಿಣ ವಲಯ ಬೀಡಿ ಕಾರ್ಮಿಕರ ಯಶಸ್ವಿ ಮುಷ್ಕರ

ಅಸಂಖ್ಯಾತ ಅಸಂಘಟಿತ ಕಾರ್ಮಿಕರನ್ನುಳ್ಳ, ಬಾಲ ಕಾರ್ಮಿಕರು ಮಹಿಳಾ ಕಾರ್ಮಿಕರನ್ನುಳ್ಳ ಬೀಡಿಮುಷ್ಕರ ದಕ್ಷಿಣದ ಮೂರು ರಾಜ್ಯಗಳಲ್ಲಿ ಕರ್ನಾಟಕ, ತಮಿಳುನಾಡು, ಕೇರಳಗಳಲ್ಲಿ ಏಕಕಾಲದಲ್ಲಿ ನಡೆದದ್ದು ಒಂದು ಚರಿತ್ರಾರ್ಹ ಘಟನೆ. ಈ ಮುಗ್ಧ ಶೋಷಿತ ಜನ ತಮ್ಮ ಜೀವನವನ್ನು ಉತ್ತಮ ಪಡಿಸಿಕೊಳ್ಳುವುದಕ್ಕಾಗಿ ಭಾಷೆ, ರಾಜ್ಯಗಳ ಮಿತಿಗಳನ್ನು ಮೀರಿ ಒಂದೇ ಉದ್ದೇಶದಿಂದ ಡಿಸೆಂಬರ್ 17 ರಂದು ಮುಷ್ಕರ ನಡೆಸಿ ಯಶಸ್ವಿಯಾಗಿದ್ದಾರೆ.

ನವಂಬರ್ 22-24ರವರೆಗೆ ಮಂಗಳೂರಿನಲ್ಲಿ ನಡೆದ ಬೀಡಿ ಕಾರ್ಮಿಕರ 5ನೇ ರಾಜ್ಯ ಸಮ್ಮೇಳನದ ಕರೆಯ ಮೇರೆಗೆ, ಬೀಡಿ ಕಾರ್ಮಿಕರು ತಮ್ಮ 8ಮುಖ್ಯ ಬೇಡಿಕೆಗಳನ್ನು ಒತ್ತಾಯಿಸಿ ದಿನಾಂಕ. 17.12.1986 ರಂದು ನಡೆಸಿದ ಮುಷ್ಕರವು ರಾಜ್ಯವಾಪಿ ಯಶಸ್ವಿಯಾಗಿ ನಡೆದಿದೆ. ಈ ಮುಷ್ಕರದಲ್ಲಿ ದಕ್ಷಿಣ ಕನ್ನಡ, ತುಮಕೂರು ಬೆಂಗಳೂರು, ಹರಿಹರ, ಧಾರವಾಡ, ಕೋಲಾರ ಜಿಲ್ಲೆಗಳಿಂದ ಸುಮಾರು 5 ಲಕ್ಷ ಬೀಡಿ ಕಾರ್ಮಿಕರು ಭಾಗವಹಿಸಿದ್ದರು.

ಈ ಮುಷ್ಕರದ ಪೂರ್ವಭಾವಿಸಿದ್ಧತೆಗಾಗಿ ದ. ಕನ್ನಡ ಜಿಲ್ಲೆಯಲ್ಲಿ ತುಮಕೂರು, ಕುಣಿಗಲ್, ಹರಿಹರ ಬೆಂಗಳೂರು, ಚನ್ನಪಟ್ಟಣಗಳಲ್ಲಿ ತಾಲ್ಲೂಕು ಮಟ್ಟಗಳಲ್ಲಿ ಗ್ರಾಮ ಮಟ್ಟದಲ್ಲಿ ಸಭೆಗಳು ನಡೆದುವು.

ಈ ಮುಷ್ಕರದಲ್ಲಿ ಪಾಲ್ಗೊಂಡ ಲಕ್ಷಾಂತರ ಬೀಡಿ ಕಾರ್ಮಿಕರಿಗೆ ಅಭಿನಂದನೆ ಸಲ್ಲಿಸುವುದರೊಂದಿಗೆ ಮುಂದೆ ಈ ಬೇಡಿಕೆಗಳನ್ನು ಪಡೆಯಲು ನಡೆಸುವ ದೀರ್ಘ ಹೋರಾಟಕ್ಕೆ ಸಿದ್ಧತೆ ನಡೆಸಬೇಕೆಂದು ರಾಜ್ಯ ಬೀಡಿ ಕಾರ್ಮಿಕರ ಒಕ್ಕೂಟ ವಿನಂತಿಸುತ್ತದೆ.

ಕಿರಿಯ ವೈದ್ಯರ ಮುಷ್ಕರಕ್ಕೆ ಸಿ. ಐ. ಟಿ. ಯು. ಬೆಂಬಲ

ಸ್ಟೈಫಂಡ್ ಹೆಚ್ಚಳ, ಕ್ಯಾಪಿಟೇಷನ್ ಶುಲ್ಕದ ಆಧಾರದ ಮೇಲೆ ಮೆಡಿಕಲ್ ಕಾಲೇಜುಗಳ ಸ್ಥಾಪನೆಗೆ ವಿರೋಧ ಇವೇ ಮೊದಲಾದ ಬೇಡಿಕೆಗಳಿಗಾಗಿ 15 ರಿಂದ ನಡೆಯುತ್ತಿರುವ ಕಿರಿಯ ವೈದ್ಯರ ಮುಷ್ಕರಕ್ಕೆ ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಸಮಿತಿಯು ಬೆಂಬಲ ಕೊಡುತ್ತದೆ. ಮಾತುಕತೆ ಪ್ರಾರಂಭಿಸಲು ಮುಷ್ಕರವನ್ನು ನಿಲ್ಲಿಸಬೇಕೆಂಬ ಆರೋಗ್ಯ ಸಚಿವರ ಷರತ್ತನ್ನು ಸಿಐಟಿಯು ವಿರೋಧಿಸುತ್ತದೆ. ಯಾವುದೇ ಪೂರ್ವ ಭಾವಿ ಷರತ್ತು ಹಾಕದೆ ಕಿರಿಯ ವೈದ್ಯರೊಂದಿಗೆ ಮಾತುಕತೆ ಪ್ರಾರಂಭಿಸಿ ಅವರ ಬೇಡಿಕೆಗಳನ್ನು ಈಡೇರಿಸಬೇಕೆಂದು ಸಿಐಟಿಯು ಆರೋಗ್ಯ ಸಚಿವರನ್ನು, ಕರ್ನಾಟಕ ಸರ್ಕಾರವನ್ನು ಆಗ್ರಹ ಪಡಿಸುತ್ತದೆ.

○

ಆರೋಗ್ಯ ಮಾರ್ಗದರ್ಶಿಗಳ ಬೆಂಗಳೂರು ಚಲೊ

1977ರಲ್ಲಿ ಜನತಾ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗ ಬರಿಗಾಲು ವೈದ್ಯರ ತಂಡವನ್ನು ನಿರ್ಮಿಸುತ್ತೇವೆಂದು ಘೋಷಿಸಿ ಸಮುದಾಯ ಆರೋಗ್ಯ ಮಾರ್ಗದರ್ಶಿಗಳನ್ನು ನೇಮಿಸಿಕೊಂಡಿತು. ಈ "ಬರಿಗಾಲು ವೈದ್ಯರು" ಕಂಗಾಲಾಗಿರುವುದು ಅವರನ್ನು ಅನಾಥರನ್ನಾಗಿ ಮಾಡಿರುವುದು ರಾಜ್ಯದಲ್ಲಿ ಅಧಿಕಾರದಲ್ಲಿರುವ ಜನತಾ ಪಕ್ಷದ ಸರ್ಕಾರವೇ. ಸಮುದಾಯ ಆರೋಗ್ಯ ಮಾರ್ಗದರ್ಶಿಗಳೆಂಬ ಘನವಾದ ಹೆಸರಿನ ಹಿಂದೆ ಹುದುಗಿರುವುದು ಉಪವಾಸ ವನವಾಸಗಳೇ ಅವರಿಗೆ ಈಗಲೂ ಮಾಸಿಕ ಸಂಭಾವನೆ ಕೇವಲ 50 ರೂ ಮತ್ತು ಸರಕಾರದ ಸಿಬ್ಬಂದಿಗೆ ಸಿಗುವ ಯಾವುದೇ ಸೌಲಭ್ಯವಿಲ್ಲ.

ಈ ಆರೋಗ್ಯ ಮಾರ್ಗದರ್ಶಿಗಳು ಸಾವಿರ ಸಂಖ್ಯೆಯಲ್ಲಿ ರಾಜ್ಯದ ಎಲ್ಲಾ ಮೂಲೆ ಮೂಲೆಗಳಿಂದ ದಿನಾಂಕ 18 ರಂದು ಬೆಂಗಳೂರಿಗೆ ಆಗಮಿಸಿ ಸರ್ಕಾರಕ್ಕೆ ತಮ್ಮ ಬವಣೆಯನ್ನು ಬಿತ್ತರಿಸಿದರು. ಮುಖ್ಯಮಂತ್ರಿಗಳ ನಿರ್ದೇಶನದ ಮೇರೆಗೆ ಆರೋಗ್ಯಮಂತ್ರಿಗಳು ಬಂದು ಮನವಿಯನ್ನು ಸ್ವೀಕರಿಸಿ ಮಾರ್ಗದರ್ಶಿಗಳ ಬೃಹತ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಿ.ಪಿ.ಐ. (ಎಂ)ನ ರಾಜ್ಯ ಕಾರ್ಯದರ್ಶಿ ಕಾಂ|| ಪಿ. ಆರ್. ರಾಮಚಂದ್ರ ರಾವ್, ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ಸಂಘದ ಅಧ್ಯಕ್ಷ ಕಾ|| ವಿ. ಎನ್. ಹಳಕಟ್ಟಿ ಮತ್ತಿತರು ಇವರನ್ನುದ್ದೇಶಿಸಿ ಭಾಷಣ ಮಾಡಿದರು.

ನಿಯೋಗವೊಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

19.12. 86 ರಂದು ಬೃಹತ್ ಸಮಾವೇಶ ನಡೆಸಿದ ಆರೋಗ್ಯ ಮಾರ್ಗದರ್ಶಿಗಳನ್ನುದ್ದೇಶಿಸಿ ಕಾಂ ವಿ.ಜೆ.ಕೆ.ನಾಯರ್ ಮಾತನಾಡಿದರು.

ಆಂಧ್ರ ಸರ್ಕಾರಿ ನೌಕರರ ಮುಷ್ಕರ

ಆಂಧ್ರ ಪ್ರದೇಶದ ಸರ್ಕಾರಿ ನೌಕರರು ಕಳೆದ 44 ದಿವಸಗಳಿಂದ ತಮ್ಮ ಬೇಡಿಕೆಗಳಿಗಾಗಿ ಮುಷ್ಕರ ನಡೆಸುತ್ತಿದ್ದಾರೆ. ಸರ್ಕಾರಿ ನೌಕರರ ಸಂಘಗಳೊಂದಿಗೆ ಮಾತುಕತೆ ನಡೆಸಿ ಮುಷ್ಕರವನ್ನು ತಡೆಯುವ ಬದಲಾಗಿ ಎನ್. ಟಿ. ರಾಮರಾವ್ ಸರ್ಕಾರವು ಮುಷ್ಕರವನ್ನು ಒಡೆಯಲು, ಪೋಲೀಸರು ಹಲವು ದಮನಕಾರಿ ವಿಧಾನಗಳನ್ನು ಅನುಸರಿಸುತ್ತಾ ಬಂದು ಮುಷ್ಕರವು ದೀರ್ಘಕಾಲ ಮುಂದುವರಿಯಲು ಕಾರಣವಾಗಿದೆ. ಏ ಸಾವಿರದಷ್ಟು ಹಂಗಾಮಿ ನೌಕರರಿಗೆ ವಜಾ ನೋಟೀಸು ಕೊಟ್ಟಿರುವುದು, ಮುಷ್ಕರದ ಮುಖಂಡರನ್ನು ಕೆಲಸದಿಂದ ವಜಾ ಮಾಡಿರುವುದು, ಅಗತ್ಯ ಸೇವಾ ನಿರ್ವಹಣಾ ಶಾಸನಗಳನ್ವಯ ಅನೇಕ ಮುಷ್ಕರಕಾರರನ್ನು ಬಂಧಿಸಿರುವುದನ್ನು ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಯು ಖಂಡಿಸಿ, ಈ ದಮನಕಾರಿ ಕ್ರಮಗಳನ್ನು ಹಿಂತೆಗೆದುಕೊಂಡು ಸಂವಿಧಾನದ ಮೂಲಕ ಮುಷ್ಕರವನ್ನು ಅಂತ್ಯಗೊಳಿಸಬೇಕೆಂದು ಆಂಧ್ರ ಪ್ರದೇಶದ ಸರ್ಕಾರವನ್ನು ಒತ್ತಾಯಿಸುತ್ತದೆ.

ಎಸ್. ಎಫ್. ಐ. ಗೆ ಜ್ಯೋತಿಬಸು ಅಭಿನಂದನೆ

(1ನೇ ಪುಟದಿಂದ)

ಒಕ್ಕೂಟ, ಜನತಾ ಚೀನಾ, ಆಫಘಾನಿಸ್ತಾನ, ಮಂಗೋಲಿಯಾ, ದಕ್ಷಿಣ ಆಫ್ರಿಕಾ, ಪ್ಯಾಲೆಸ್ಟೈನ್, ಪಶ್ಚಿಮ ಸಹರಾ, ಬಾಂಗ್ಲಾದೇಶ, ನೇಪಾಳ, ಇರಾನ್,ಇರಾಕ್, ಪಾಲಿಸಾರಿಯೋ, ಯೆಮೆನ್ ಮುಂತಾದ ಅನೇಕ ವಿದೇಶಿ ಪ್ರತಿನಿಧಿಗಳು ಸಹ ಪಾಲ್ಗೊಂಡು ಸೌಹಾರ್ದ ಶುಭಾಶಯ ಕೋರಿ ಮಾತನಾಡಿದರು. ಬ್ರಿಟನ್ನಿನ ಇಂಡಿಯನ್ ಯೂತ್ ಅಸೋಸಿಯೇಷನ್ ಪ್ರತಿನಿಧಿಗಳು ವೀರ ತೆಲಂಗಾಣ ಸಶಸ್ತ್ರ ಸಂಗ್ರಾಮದ ಕ್ರಾಂತಿಕಾರಿ ಪರಂಪರೆಯನ್ನುಳ್ಳ ಮತ್ತು ಮಹಾನ್‌ನಾಯಕ ಪುಚ್ಚಲಪಲ್ಲಿ ಸುಂದರಯ್ಯನವರು ಜನ್ಮಿಸಿದ ನಾಡಿನ ನೆಲದಲ್ಲಿ ನಿಂತು ಚರಿತ್ರಾರ್ಹ ವಿದ್ಯಾರ್ಥಿ ಸಮ್ಮೇಳನದಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಿದ ಎಸ್.ಎಫ್.ಐ. ಗೆ ಅಭಿನಂದನೆ ಸಲ್ಲಿಸಿದಾಗ ಜನಸ್ತೋಮವು ಹರ್ಷೋದ್ಗಾರವನ್ನು ವ್ಯಕ್ತಪಡಿಸಿತು. ವಿಯಟ್ನಾಂ, ಜನತಾ ಕೊರಿಯಾ ಮುಂತಾದ ದೇಶಗಳಿಂದಲೂ ಹಾಗೂ ಅಂತರರಾಷ್ಟ್ರೀಯ ವಿದ್ಯಾರ್ಥಿ ಸಂಘದ ವತಿಯಿಂದಲೂ ಸಹ ಶುಭಾಶಯ ಪತ್ರಗಳು ಬಂದಿದ್ದವು.

ಒಂದು ಲಕ್ಷಕ್ಕೂ ಮೀರಿ ಸಭಿಕರನ್ನುದ್ದೇಶಿಸಿ ಮಾತನಾಡುತ್ತಾ ಪಶ್ಚಿಮ ಬಂಗಾಳ ಎಡರಂಗ ಸರ್ಕಾರದ ಮುಖ್ಯಮಂತ್ರಿ ಹಾಗೂ ಸಿ. ಪಿ. ಐ. (ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ|| ಜ್ಯೋತಿಬಸುರವರು ಎಸ್. ಎಫ್. ಐ. ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಮೌಲ್ಯಗಳಿಗಾಗಿ ಹೋರಾಡುತ್ತಿರುವ ದೇಶದ ಏಕಮಾತ್ರ ವಿದ್ಯಾರ್ಥಿ ಸಂಘಟನೆಯಾಗಿದೆಯೆಂದು ಅಭಿನಂದಿಸಿದರು.

ವಿದ್ಯಾರ್ಥಿಗಳು ರಾಜಕೀಯದಿಂದ ದೂರವಿರಬೇಕೆಂಬ ವಾದವೊಂದು ದೇಶದಲ್ಲಿ ಕೇಳಿ ಬರುತ್ತಿರುವುದು ಅರ್ಥಹೀನವಾಗಿದೆ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಗಾಂಧಿ, ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಲು ಕರೆ ನೀಡಿದುದನ್ನು ಕಾಂ|| ಜ್ಯೋತಿಬಸು ನೆನಪಿಸಿದರು. ವಿದ್ಯಾರ್ಥಿಗಳು ಸಮಾಜದ ಅವಿಭಾಜ್ಯ ಅಂಗವಾಗಿದ್ದು ಪಶ್ಚಿಮ ಬಂಗಾಳ ಮುಂತಾದೆಡೆ 18 ವರ್ಷಕ್ಕೆ ಮತದಾನದ ಹಕ್ಕು ನೀಡಿರುವಾಗ ರಾಜಕೀಯ ಜ್ಞಾನವಿಲ್ಲದೆ ಈ ವಯೋಮಿತಿಯ ಮತದಾರರು ಏನು ಮಾಡಬೇಕೆಂದು ಪ್ರಶ್ನಿಸಿದರು. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಬದಿಗೊತ್ತಬೇಕೆಂದೇನಲ್ಲ. ಆದರೆ ಪಠ್ಯ ವಿಷಯಗಳೊಂದಿಗೆ ಪ್ರಪಂಚದ ವಿಭಿನ್ನ ಆರ್ಥಿಕ ವ್ಯವಸ್ಥೆಗಳ ಬಗ್ಗೆ ಹಾಗೂ ವೈಜ್ಞಾನಿಕ ಸಮಾಜವಾದದ ಕುರಿತು ಸೈದ್ಧಾಂತಿಕ ಚರ್ಚೆ ನಡೆಸಬೇಕಾದ ಅವಶ್ಯಕತೆಯಿದೆಯೆಂದು ಒತ್ತಿ ಹೇಳಿದರು. ಶ್ರೀ ರಾಜೀವ್ ಗಾಂಧಿಯವರ ನೂತನ ಆರ್ಥಿಕ ನೀತಿ ಮತ್ತು ನೂತನ ಶಿಕ್ಷಣ ನೀತಿಗಳೆರಡೂ ಮತ್ತಷ್ಟು ಪ್ರಗತಿ ವಿರೋಧಿ ಕ್ರಮಗಳಾಗಿವೆಯೆಂದು ವಿಮರ್ಶಿಸಿದರು.

ಮಾತೃಭಾಷೆಯ ಮಾಧ್ಯಮದಲ್ಲಿ ಶಿಕ್ಷಣ ನೀಡುವ ಬದಲು ಹಿಂದಿಭಾಷೆಯನ್ನು ಹೇರುವುದನ್ನು ಖಂಡಿಸಿದರು. ನಾವು ಹಿಂದಿ ವಿರೋಧಿಗಳಲ್ಲವೆಂದು ಸ್ಪಷ್ಟಪಡಿಸಿದ ಅವರು ದೇಶದಲ್ಲಿ ಹಿಂದಿ ಭಾಷಿತರು ಅಧಿಕ ಸಂಖ್ಯೆಯಲ್ಲಿದ್ದರೂ ಬಹು ಸಂಖ್ಯಾತ ಭಾರತೀಯರು ಹಿಂದಿಯೇತರ ಭಾಷೆಗಳನ್ನು ಮಾತನಾಡುವುದನ್ನು ಗಮನಿಸಬೇಕೆಂದು ತಿಳಿಸಿದರಲ್ಲದೇ ವಿದ್ಯಾರ್ಥಿ ಸಮುದಾಯದ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಯು..ಜಿಸಿ. ದಾಳಿಯನ್ನು ಖಂಡಿಸಿದರು.

ಭಾರತದ ವಿದ್ಯಾರ್ಥಿ ಚಳುವಳಿಯ ನಿರ್ಮಾಪಕರಲ್ಲೊಬ್ಬರಾದ ಹಾಗೂ ಸಿ.ಪಿ.ಐ. (ಎಂ) ಪಾಲಿಟ್ ಬ್ಯುರೋ ಸದಸ್ಯರಾದ ಕಾ|| ಮಾಕಿನೇನಿ ಬಸವಪುನ್ನಯ್ಯನವರು ಮಾತನಾಡುತ್ತಾ

ಗೂರ್ಖಾಲ್ಯಾಂಡ್ ಚಳುವಳಿಗೆ ಪ್ರಧಾನಿಯವರು ಪ್ರತ್ಯಕ್ಷರಾಗಿ ಮತ್ತು ಪರೋಕ್ಷವಾಗಿ ಬೆಂಬಲ ನೀಡುತ್ತಿರುವುದಲ್ಲದೆ ಹರಿಯಾಣದ ಮತದಾರರು ತಿರುಗಿ ಬೀಳಬಹುದೆಂದು ಹೆದರಿ

ರಾಜೀವ್ ಗಾಂಧಿಯವರ ವೈಖರಿಯಲ್ಲಿ ದೇಶದ ಸಮಗ್ರತೆಯನ್ನು ಸಂರಕ್ಷಿಸಲಾಗುವುದಿಲ್ಲ. ಕಾಂಗ್ರೆಸ್ (ಐ) ಆಳ್ವಿಕೆ ಶಾಶ್ವತವಲ್ಲ ವಿಶಾಲ ಐಕ್ಯ ಜನಾಂದೋಲನದ ಮೂಲಕ ಈ ಸರ್ಕಾರವನ್ನು ಬದಲಾಯಿಸಬಹುದು.

-ಎಂ. ಬಸವಪುನ್ನಯ್ಯ

ಒಂದು ವರ್ಷವಾದರೂ 'ಪಂಜಾಬ್' ಒಪ್ಪಂದವನ್ನು ಜಾರಿಗೊಳಿಸಲಾಗಿಲ್ಲ. ತ್ರಿಪುರದಲ್ಲಿನ ಉಗ್ರಗಾಮಿಗಳಿಗೆ ಬಾಂಗ್ಲಾ ದೇಶದಲ್ಲಿ ತರಬೇತಿ ಮತ್ತು ನೆರವು ಲಭಿಸುತ್ತಿರುವುದು ಬಹಿರಂಗ ಸತ್ಯವಾದರೂ ನಮ್ಮ ಪ್ರಧಾನಿಯವರು ಬಾಂಗ್ಲಾ ದೇಶದ ಅಧ್ಯಕ್ಷರೊಡನೆ ಖಚಿತವಾಗಿ ಚರ್ಚಿಸುತ್ತಿಲ್ಲವೆಂದು ಪ್ರಶ್ನಿಸಿದರು.

Printed & Published by P. Ramachandra Rao on behalf of the Commuaist Party of India [Marxist] Karnataka State Committe,
K. V. Temple Stree, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P. Ramachandra Rao
Managing Editor : N. K. Upadhyaya